ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-6, May – June 2026, Pp. 37-41
©*IIMRD*, Mysuru
IIMRD JOURNALS
www.iimrd.com

# ಪಶುಆಹಾರ (ಕ್ಯಾಟಲ್‌ಫುಡ್) ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ದೇವರಾಜ ಕೆ[1] ಮತ್ತು ಡಾ. ಸಂದೀಪ ಆರ್[2]**

[1]ಉಪನ್ಯಾಸಕರು, ಎಲ್‌ಬಿ ಅಂಡ್ ಎಸ್‌ಬಿಎಸ್ ಕಾಲೇಜು, ಸಾಗರ, ಶಿವಮೊಗ್ಗ ಜಿಲ್ಲೆ

[2]ಉಪನ್ಯಾಸಕರು. ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ ಶಿವಮೊಗ್ಗ ಜಿಲ್ಲೆ

**ಸಾರಾಂಶ: (Abstract)**

*ಭಾರತೀಯ ಸಮಾಜ ಕೃಷಿಯಾಧಾರಿತ ಸಮಾಜವಾಗಿದ್ದು ಕೃಷಿಯ ಜೊತೆ ಜೊತೆಗೆ. ಉಪವೃತ್ತಿಗಳಾದ ಹೈನುಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮಾಡಿಕೊಂಡು ತನ್ನ ಜೀವನ ನಿರ್ವಹಣೆ ಮಾಡುತ್ತಿದ್ದಾನೆ. ಮನುಷ್ಯನಿಗೆ ಪೌಷ್ಟಿಕ ಆಹಾರ ಹೇಗೆ ಮುಖ್ಯವಿದೆಯೋ ಹಾಗೆ. ಪಶುಸಂಗೋಪನೆಗೂ ಸಹ ಪೌಷ್ಟಿಕ ಆಹಾರದ ಅವಶ್ಯಕತೆ ಇದೆ. ಪ್ರತಿನಿತ್ಯ ಹಾಲು ಕೊಡುವ ಹಸುಗಳಿಗೆ ಪೌಷ್ಟಿಕ ಆಹಾರ ನೀಡಿದರೆ ಹಾಲು ಉತ್ಪಾದನೆಯನ್ನು ಹೆಚ್ಚು ಮಾಡಬಹುದೆಂದು ಹಾಗೂ ಆರ್ಥಿಕ ಪ್ರಗತಿ ಸಾಧಿಸಬಹುದೆಂದು ಹಾಗೂ ವೃತ್ತಿಯಾಗಿಸಿಕೊಂಡು ನೈಸರ್ಗಿಕವಾಗಿ ಕೃಷಿಮಾಡಿರುವ ಗೋನ್‌ಜೋಳ, ಸುಣ್ಣ, ಗೊಬ್ಬರ, ಮುಂತಾದ ಪದಾರ್ಥಗಳನ್ನು ಪರಿಷ್ಕರಿಸಿ ಪಶುಗಳಿಗೆ ಆಹಾರವಾಗಿ ತಯಾರಿಸುವುದರಲ್ಲಿ ಪಶು ಆಹಾರ ಘಟಕಗಳು, ಮಹತ್ತರ ಪಾತ್ರನಿರ್ವಹಿಸುತ್ತವೆ. ಇದರಿಂದಾಗುವ ಲಾಭದಿಂದ ಆರ್ಥಿಕ ಪ್ರಗತಿಯನ್ನು ಸಾಧಿಸಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಪಶುಆಹಾರ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಕುರಿತು ಸಮಾಜಶಾಸ್ತ್ರೀಯ ದೃಷ್ಠಿಕೋನದಲ್ಲಿ ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಕೃಷಿ, ಕೃಷಿಉತ್ಪನ್ನ, ಪಶುಸಂಗೋಪನೆ, ಪಶುಆಹಾರ ಕಾರ್ಖಾನೆ, ಕಾರ್ಮಿಕರು.*

## ಪೀಠಿಕೆ

ಜಗತ್ತಿನ ಪ್ರತಿಯೊಂದು ದೇಶವು ಕೋಟ್ಯಂತರ ಕಾರ್ಮಿಕ ಶಕ್ತಿ ಸಾಮರ್ಥ್ಯವನ್ನು ವ್ಯರ್ಥಗೊಳಿಸಿ ಮುನ್ನಡೆಯಲಾರದು. ಕಾರ್ಖಾನೆಗಳಲ್ಲಿ 75% ರಷ್ಟು ಯಂತ್ರಗಳ ಬಳಕೆ ಇದ್ದರೂ ಶೇಕಡ 25% ರಷ್ಟು, ಕಾರ್ಮಿಕ ಶಕ್ತಿ ಸಾಮರ್ಥ್ಯವು ಅಗತ್ಯವಾಗಿರುತ್ತದೆ. ಕಾರ್ಮಿಕರ ಜೀವನ ನಿರ್ವಹಣೆಗೆ ಉದ್ಯೋಗ ಅಗತ್ಯವಾಗಿದೆ. ವರ್ಗೀಸ್ ಕುರಿಯನ್ ಅವರು ಭಾರತದ ಪ್ರಸಿದ್ಧ ಉದ್ಯಮಿಯಾಗಿದ್ದು, ಕ್ಷೀರಕ್ರಾಂತಿಗೆ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. ಅಮುಲ್ ಬ್ರಾಂಡ್ ಮೂಲಕ ಭಾರತೀಯ ಹಾಲು

*Please cite this article as:* ದೇವರಾಜ, ಕೆ ಮತ್ತು ಸಂದೀಪ, ಆರ್. (2026). ಪಶುಆಹಾರ (ಕ್ಯಾಟಲ್‌ಫುಡ್) ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(6). ಪು.ಸಂ.* 37–41

ಉತ್ಪಾದನೆಯಲ್ಲಿ ಮಹತ್ತರ ಸಾಧನೆ ಮಾಡಿ ಹೆಸರಾದವರು. ಅವರ ಪ್ರಭಾವದಿಂದ ಭಾರತವು ವಿಶ್ವದ ಅತಿದೊಡ್ಡ ಹಾಲು ಉತ್ಪಾದಕ ರಾಷ್ಟ್ರಗಳಲ್ಲಿ ಒಂದಾಗಿ ಬೆಳೆದಿದೆ.

1949ರಲ್ಲಿ ಅವರು ಗುಜರಾತ್‌ನ ಆನಂದ ಹಾಲು ಸಹಕಾರ ಸಂಸ್ಥೆಗೆ ಸೇರಿ, ಅಮುಲ್ ಬ್ರಾಂಡ್‌ನ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಪರೇಷನ್ ಫ್ಲಡ್ ಯೋಜನೆಯ ಮೂಲಕ ಅವರ ಶ್ರಮವು ಭಾರತೀಯ ರೈತರಿಗೆ ಆರ್ಥಿಕ ಸದೃಢತೆಯನ್ನು ನೀಡಿತು. ಕುರಿಯನ್ ಅವರ ಮಾರ್ಗದರ್ಶನದಲ್ಲಿ, ಆನಂದ್ ಯೂನಿಯನ್ ಮಿಲ್ಕ್ ಮತ್ತು ಹಾಲು ಉತ್ಪನ್ನಗಳ ಉತ್ಕೃಷ್ಟತೆ, ಪೂರೈಕೆ ವ್ಯವಸ್ಥೆಯಲ್ಲಿ ಕ್ರಾಂತಿಯುಂಟಾಯಿತು. 1970 ರಿಂದ 1996ರವರೆಗೆ ನಡೆದ ಈ ಹಾಲು ಕ್ರಾಂತಿ, ಭಾರತೀಯ ಹಾಲು ಉತ್ಪಾದನೆಯಲ್ಲಿ ದೊಡ್ಡ ಬದಲಾವಣೆಯನ್ನು ತಂದಿತು. ಈ ಕಾರಣಗಳಿಂದ ವರ್ಗೀಸ್ ಕುರಿಯನ್ ಅವರನ್ನು "ಭಾರತೀಯ ಕ್ಷೀರ ಕ್ರಾಂತಿಯ ಜನಕ" ಎಂದು ಕರೆದಿದ್ದಾರೆ.

**ಸಂಶೋಧನಾ ಸಮಸ್ಯೆ ಹೇಳಿಕೆ**

ಪ್ರಸ್ತುತ ಸಂಶೋಧನೆಗೆ ಸಂಬಂಧಿಸಿದಂತೆ **"**ಪಶು ಆಹಾರ (ಕ್ಯಾಟಲ್ ಫುಡ್) ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ**"** ಎಂಬ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಸಂಶೋಧನೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಹಾಗೂ ಸೂಕ್ತ ವಿಷಯಗಳಲ್ಲಿ ಕಲೆ ಹಾಕುವುದರ ಮೂಲಕ ಸಂಶೋಧನಾ ಸಮಸ್ಯೆಗೆ ಸಂಬಂಧಿಸಿದ ವಿವರಣೆಯನ್ನು ನೀಡಲಾಗಿದೆ.

**ಅಧ್ಯಯನ ಜನಸಂಖ್ಯೆ ಮತ್ತು ಮಾದರಿ**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕಾಗಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಸಂಡ ಗ್ರಾಮದ ಪಶುಆಹಾರ ಕಾರ್ಖಾನೆಯಲ್ಲಿ ದುಡಿಯುತ್ತಿರುವ 30 ಜನ ಕಾರ್ಮಿಕರನ್ನು ಸರಳ ಯಾದೃಚ್ಛಿಕ ವಿಧಾನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ. ಸಂಶೋಧನೆಗೆ ಅಗತ್ಯವಾದ ಸಂಶೋಧನಾ ತಂತ್ರ ಹಾಗೂ ವಿಧಾನಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ.

**ಅಧ್ಯಯನದ ಉದ್ದೇಶಗಳು**

- ಪಶುಆಹಾರ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.
- ಕಾರ್ಮಿಕರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಕುರಿತು ಅಧ್ಯಯನ ಮಾಡುವುದು.
- ಕಾರ್ಮಿಕರು ಎದುರಿಸುತ್ತಿರವ ಸಮಸ್ಯೆಗಳ ನಿವಾರಣೆಗೆ ಸಲಹೆ ನೀಡುವುದು.

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಅವಲೋಕನ, ಸಂದರ್ಶನ, ಗುಂಪುಚರ್ಚೆ ವಿಧಾನಗಳನ್ನು ಬಳಸಿಕೊಂಡು

ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ಗ್ರಂಥಗಳು, ಸಂಶೋಧನಾ ಪ್ರಬಂಧಗಳು, ಸರ್ಕಾರದ ವರದಿಗಳು, ನಿಯತಕಾಲಿಕೆಗಳು ಮುಂತಾದ ಮೂಲಗಳಿಂದ ಸಂಗ್ರಹಿಸಿಕೊಳ್ಳಲಾಗಿದೆ.

**ಮಾಹಿತಿ ವಿಶ್ಲೇಷಣೆ**

ವಿವಿಧ ಸಂಶೋಧನಾ ವಿಧಾನ ಮತ್ತು ತಂತ್ರಗಳನ್ನು ಬಳಸಿಕೊಂಡು ಸಂಗ್ರಹಿಸಿದ ಮಾಹಿತಿಯನ್ನು ಎಸ್‌ಪಿಎಸ್‌ಎಸ್ ತಂತ್ರಜ್ಞಾನದಿಂದ ಶೇಕಡವಾರು ಕೋಷ್ಠಕಗಳನ್ನು ಸಿದ್ಧಪಡಿಸಿ ಸಮಾಜಶಾಸ್ತ್ರೀಯ ಚೌಕಟ್ಟಿನಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಕೋಷ್ಠಕ 1: ಕಾರ್ಖಾನೆಯಲ್ಲಿ ಬದಲಾವಣೆ ಬಯಸುವ ಕಾರ್ಮಿಕರ ವಿವರ**

| **ಕಾರ್ಮಿಕರು** | **ವೃತ್ತಿ** | **ಶೇಕಡ** |
|---|---|---|
| ಬದಲಾವಣೆ ಬಯಸುವವರು | 19 | 64.0 |
| ಬದಲಾವಣೆಗೆ ಇಚ್ಛಿಸದಿರುವವರು | 11 | 36.0 |
| **ಒಟ್ಟು** | **30** | **100.00** |

ಈ ಮೇಲಿನ ಕೋಷ್ಠಕವನ್ನು ಅವಲೋಕಿಸಿದಾಗ ತಾವು ಕೆಲಸ ಮಾಡುತ್ತಿರುವ ಕಾರ್ಖಾನೆಯಲ್ಲಿ ಶೇ.64.0 ಮಂದಿ ಬದಲಾವಣೆಯಾಗಬೇಕೆಂದು ಹಾಗೂ ಶೇ.36.0 ಕಾರ್ಮಿಕರು ಯಾವುದೇ ಬದಲಾವಣೆ ಅಗತ್ಯವಿಲ್ಲ ಎಂಬುದಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಕೋಷ್ಠಕ 2: ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಸೌಲಭ್ಯಗಳ ವಿವರ**

| **ಸೌಲಭ್ಯಗಳು** | **ಆವೃತ್ತಿ (N=30)** | **ಶೇಕಡ** |
|---|---|---|
| ಕ್ಯಾಂಟಿನ್ | 30 | 100.0 |
| ವೈದ್ಯಕೀಯ | 16 | 53.0 |
| ವಿಶ್ರಾಂತಿ ಗೃಹ | 7 | 23.1 |
| ವಿರಾಮ ಚಟುವಟಿಕೆ | 1 | 3.3 |

ಈ ಮೇಲ್ಕಂಡ ಕೋಷ್ಠಕದಿಂದ ತಿಳಿದುಬರುವ ಮಾಹಿತಿ ಎಂದರೆ ಸಂಶೋಧನೆಯಲ್ಲಿ ಶೇಕಡ 100 ಮಾಹಿತಿದಾರರು ತಿಳಿಸುವುದೇನೆಂದರೆ ಕಾರ್ಖಾನೆಯು ಕ್ಯಾಂಟಿನ್ ಸೌಲಭ್ಯ ಹೊಂದಿದೆ ಎಂದು ಶೇಕಡ 53 ರಷ್ಟು ವೈದ್ಯಕೀಯ ಸೌಲಭ್ಯ ಹೊಂದಿದೆ. ಶೇಕಡ 23.1 ರಷ್ಟು ವಿಶ್ರಾಂತಿ ಗೃಹ ಸೌಲಭ್ಯ ಹೊಂದಿದೆ ಎಂದು, ಶೇ.3.3 ವಿರಾಮ ಚಟುವಟಿಕೆಯ ಸೌಲಭ್ಯ ಹೊಂದಿದೆ ತಿಳಿಸಿದ್ದಾರೆ. ಒಟ್ಟಿನಲ್ಲಿ ಕಾರ್ಖಾನೆಯು ಕಾರ್ಮಿಕರಿಗೆ ಬೇಕಾದ ಅಗತ್ಯ ಸೌಲಭ್ಯ ಒದಗಿಸಿಕೊಟ್ಟಿದೆ ಎಂಬುದನ್ನು ಮನಗಾಣಬಹುದಾಗಿದೆ.

**ಕೋಷ್ಠಕ 3: ಕಾರ್ಮಿಕರ ಬೇಡಿಕೆಗಳ ವಿವರ**

| ಬೇಡಿಕೆಗಳು | ಆವೃತ್ತಿ (N=30) | ಶೇಕಡವಾರು |
|---|---|---|
| ವೇತನ ಹೆಚ್ಚಳ | 19 | 62.7 |
| ಭತ್ಯೆ ನೀಡುವುದು | 03 | 9.9 |
| ಮೂಲಭೂತ ಸೌಲಭ್ಯಗಳು | 08 | 26.4 |
| ಕಲ್ಯಾಣ ಕಾರ್ಯಕ್ರಮ | 06 | 19.8 |
| ಇತರೆ | 07 | 23.1 |

ಈ ಮೇಲ್ಕಂಡ ಕೋಷ್ಟಕದಿಂದ ತಿಳಿದು ಬರುವುದನೆಂದರೆ ಸಂಶೋಧನೆಯಲ್ಲಿ ಮಾಹಿತಿದಾರರು ನೀಡಿರುವ ಮಾಹಿತಿಯ ಪ್ರಕಾರ ಕಾರ್ಮಿಕರ ಬೇಡಿಕೆಗಳಾದ ವೇತನ ಹೆಚ್ಚಳ ಮಾಡಬೇಕು ಎನ್ನುವ ಕಾರ್ಮಿಕರು ಶೇಕಡ 62.7ರಷ್ಟು, ಕಾರ್ಮಿಕರಿಗೆ ಭತ್ಯೆ ನೀಡಬೇಕು ಎನ್ನುವ ಬೇಡಿಕೆ ಇರುವ ಕಾರ್ಮಿಕರು ಶೇಕಡ 9.9ರಷ್ಟು, ಮೂಲಭೂತ ಸೌಲಭ್ಯ ಬೇಡಿಕೆ ಕಾರ್ಮಿಕರು ಶೇಕಡ 26.4ರಷ್ಟು, ಕಾರ್ಮಿಕ ಕಲ್ಯಾಣ ಬೇಡಿಕೆ ಇರುವ ಮಾಹಿತಿದಾರರು ಶೇಕಡ 19.8ರಷ್ಟು, ಇತರೆ ಬೇಡಿಕೆ ಇರುವ ಮಾಹಿತಿದಾರರು ಶೇಕಡ 23.1ರಷ್ಟಿದ್ದಾರೆ. ಮೇಲಿನ ಕೋಷ್ಠಕದ ಪ್ರಕಾರ ಕಾರ್ಮಿಕ ಅವಶ್ಯಕ ಬೇಡಿಕ ಇರುವುದನ್ನು ನೋಡಬಹದು.

**ಕೋಷ್ಠಕ 3: ಕಾರ್ಮಿಕರ ಆರೋಗ್ಯ ತಪಾಸಣೆಯ ವಿವರ**

| ಆರೋಗ್ಯ ತಪಾಸಣೆ | ಆವೃತ್ತಿ (N=30) | ಶೇಕಡವಾರು |
|---|---|---|
| ಕಾರ್ಖಾನೆಯಲ್ಲಿ ವೈದ್ಯಕೀಯ ಸೌಲಭ್ಯವಿರುವುದು | 2 | 6.6 |
| ಸರ್ಕಾರಿ ಆಸ್ಪತ್ರೆ | 18 | 59.4 |
| ಖಾಸಗಿ ಆಸ್ಪತ್ರೆ | 16 | 52.8 |
| ಇತರೆ | 1 | 3.3 |

ಮೇಲಿನ ಕೋಷ್ಠಕದಲ್ಲಿ ಕಾರ್ಮಿಕರು ಅನಾರೋಗ್ಯಕ್ಕೊಳಗಾದಾಗ ಎಲ್ಲಿ ತಪಾಸಣೆ ಮಾಡಿಸಿಕೊಳ್ಳುತ್ತಾರೆ ಎಂಬ ವಿವರವನ್ನು ನೀಡಲಾಗಿದೆ. ಕೋಷ್ಠಕದ ಪ್ರಕಾರ ಶೇ.6.6 ರಷ್ಟು ಕಾರ್ಮಿಕರು ಕಾರ್ಖಾನೆಯಲ್ಲಿರುವ ಆರೋಗ್ಯ ಕೇಂದ್ರದಲ್ಲಿಯೂ, ಶೇ59.4ರಷ್ಟು ಕಾರ್ಮಿಕರು ಸರ್ಕಾರಿ ಆಸ್ಪತ್ರೆಗಳಲ್ಲಿಯೂ, ಶೇ.52.8ರಷ್ಟು ಕಾರ್ಮಿಕರು ಖಾಸಗಿ ಆಸ್ಪತ್ರೆಗಳಲ್ಲಿಯೂ ಹಾಗೂ ಶೇ.3.3ರಷ್ಟು ಕಾರ್ಮಿಕರು ಇತರೆ ಅಂದರೆ ಮನೆ ಮದ್ದು ಮತ್ತು ಆರ್ಯುವೇದದ ಔಷಧಿಗಳನ್ನು ಬಳಸುವುದು ಸಂಶೋಧನೆಯಿಂದ ತಿಳಿದುಬಂದಿದೆ.

**ಸಲಹೆಗಳು**

- ಕಾರ್ಖಾನೆಯಲ್ಲಿರುವ ಕಾರ್ಮಿಕರಿಗೆ ವೃತ್ತಿಪರ ಮತ್ತು ಕೌಶಲ್ಯ ಶಿಕ್ಷಣವನ್ನು ನೀಡಬೇಕು.
- ಕಾರ್ಮಿಕರಿಗೆ ಕಾರ್ಖಾನೆಯಲ್ಲಿಯೇ ಹೆಚ್ಚಿನ ವೈದ್ಯಕೀಯ ಸೌಲಭ್ಯ ಕಲ್ಪಿಸಿಕೊಡಬೇಕು.

- ಕಾರ್ಮಿಕರಿಗೆ ವೇತನವನ್ನು ಹೆಚ್ಚಿಸಬೇಕು.

**ಪರಾಮರ್ಶನ ಗ್ರಂಥಗಳು**


- ಆಂಜಿನಪ್ಪ, ಬಿ. ಹೆಚ್. (2009). *ಮಹಿಳೆ ಮತ್ತು ದುಡಿಮೆ.* ದೇಶಿ ಪುಸ್ತಕ.
- ಇಂದಿರಾ, ಆರ್. (1995). *ಭಾರತೀಯ ಸಮಾಜ.* ಕನ್ನಡ ಪುಸ್ತಕ ಪ್ರಾಧಿಕಾರ.
- ಹೀರೆಮಠ, ಎಸ್. ಜಿ. (1979). *ಸಾಮಾಜಿಕ ನೀತಿ ಮತ್ತು ಸಾಮಾಜಿಕ ಕಲ್ಯಾಣ.* ವಿದ್ಯಾನಿಧಿ ಪ್ರಕಾಶನ.
- ಕೃಷ್ಣಮೂರ್ತಿ, ಹೆಚ್. ಎಸ್. (1996). *ಕರ್ನಾಟಕ ಆರ್ಥಿಕತೆ.* ರವಿ ಗ್ರಾಫಿಕ್.
- ರಾವ್, ಎನ್. ಆರ್. (1976). *ಭಾರತೀಯ ಔದ್ಯೋಗೀಕರಣ.* ಕನ್ನಡ ಅಧ್ಯಯನ ಪೀಠ ಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾನಿಲಯ.
- ರೈ, ಹೆಚ್.ಆರ್. (1993). *ಭಾರತದ ಆರ್ಥಿಕ ವ್ಯವಸ್ಥೆ.* ಎಸ್.ಬಿ.ಎಸ್. ಪಬ್ಲಿಕೇಶನ್ಸ್.
- ಸರ್ದೇಸಾಯಿ, ಎಸ್. ಜಿ. (1983). *ಮಾರ್ಕ್ಸ್ ವಾದ ಮತ್ತು ಭಾರತದಲ್ಲಿ ದುಡಿಯುವ ವರ್ಗದ ಪಾತ್ರ.* ನವಕರ್ನಾಟಕ ಪಬ್ಲಿಕೇಷನ್ಸ್.